OCTOBER 07, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- 'ಪಿ.ಎಂ. ಕಿಸಾನ್ ಸಮ್ಮಾನ್ ಯೋಜನೆ' ರೈತರಿಗೆ ಸಂಜೀವಿನಿ – ಪ್ರಲ್ಹಾದ ಜೋಶಿ.
- ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಮಂಡಳಿಯಿಂದ, ಹದಿನೆಂಟು ಶೀತಲೀಕರಣ ಘಟಕಗಳ ನಿರ್ಮಾಣ – ಶಿವಾನಂದ ಪಾಟೀಲ.
- ದೇಶದಾದ್ಯಂತ 14 ಲಕ್ಷ ಮಹಿಳೆಯರ ಕೈಯಲ್ಲಿ, ಸ್ಥಳೀಯ ಆಡಳಿತದ ಚುಕ್ಕಾಣಿ – ಡಾಕ್ಟರ್ ಜಿ.ಪರಮೇಶ್ವರ.
- ಮೈಸೂರಿನ ಪಾರಂಪರಿಕ ಕಟ್ಟಡಗಳ ಮಹತ್ವ ತಿಳಿಸಲು, 'ಡಿಜಿಟಲ್ ಸ್ಪರ್ಷ' – ಎ. ದೇವರಾಜು.
- ಇಂದು, 'ಬಿಳಿ ಬಂಗಾರ', ಹತ್ತಿಯ ವಿಶ್ವ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ, 'ಪಿ.ಎಂ. ಕಿಸಾನ್ ಸಮ್ಮಾನ್ ಯೋಜನೆ' ರೈತರಿಗೆ ಸಂಜೀವಿನಿಯಾಗಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ಕೇಂದ್ರ ಸರ್ಕಾರ ಪಿ.ಎಂ. ಕಿಸಾನ್ ಸಮ್ಮಾನ್ ಯೋಜನೆಯಡಿ, 18ನೇ ಕಂತಿನ ನಿಧಿಯನ್ನು, ರೈತರ ಖಾತೆಗೆ ನೇರವಾಗಿ ವರ್ಗಾಯಿಸಿದ ಹಿನ್ನೆಲೆ, ಸಚಿವರು ಪ್ರತಿಕ್ರಿಯೆ ನೀಡಿ, 'ಕಿಸಾನ್ ಸಮ್ಮಾನ್ ಯೋಜನೆ'ಯಡಿ, ವರ್ಷಕ್ಕೆ ಆರು ಸಾವಿರ ರೂಪಾಯಿ ಧನಸಹಾಯ ನೀಡುವ ಮೂಲಕ, ದೇಶದ 11 ಕೋಟಿ ರೈತರಿಗೆ ಸಂಜೀವಿನಿಯಾಗಿದೆ, ಎಂದಿದ್ದಾರೆ. ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ, 1 ಕೋಟಿ 15 ಲಕ್ಷ ಜನ ರೈತರು ಈ ಯೋಜನೆಯ ಲಾಭ ಪಡೆದಿದ್ದಾರೆ. 23 ಕೋಟಿ 9 ಲಕ್ಷ ರೂಪಾಯಿ ಹಣ ನೇರವಾಗಿ, ಫಲಾನುಭವಿ ರೈತರ ಖಾತೆಗೆ ಜಮೆಯಾಗಿದೆ. ಈ ಯೋಜನೆಯಿಂದಾಗಿ ದೇಶದಲ್ಲಿ ಕೃಷಿಗೆ ಅಪೂರ್ವ ಉತ್ತೇಜನ ದೊರಕಿದೆ. ರೈತರ ಸಾಲವನ್ನು ಕಡಿಮೆ ಮಾಡಿದೆ. ಅಲ್ಲದೇ, ಗ್ರಾಮೀಣ ಪ್ರದೇಶದ ಸಮುದಾಯಗಳನ್ನು ಸಶಕ್ತರನ್ನಾಗಿಸಿದೆ ಎಂದು ಪ್ರತಿಪಾದಿಸಿದ್ದಾರೆ.

<><><>

ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಮಂಡಳಿ – ಎ.ಪಿ.ಎಂ.ಸಿ. ವತಿಯಿಂದ, ರಾಜ್ಯಾದ್ಯಂತ ಹದಿನೆಂಟು ಶೀತಲೀಕರಣ ಘಟಕಗಳನ್ನು ನಿರ್ಮಿಸಲಾಗುವುದು ಎಂದು, ಕೃಷಿ ಮಾರುಕಟ್ಟೆ ಖಾತೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಹಾವೇರಿ ಜಿಲ್ಲೆ, ಬ್ಯಾಡಗಿ ತಾಲೂಕಿನ ಹನುಮನಹಟ್ಟಿಯಲ್ಲಿ, 10 ಕೋಟಿ 35 ಲಕ್ಷ ರೂಪಾಯಿ ವೆಚ್ಚದಲ್ಲಿ, ನೂತನ ಶೀತಲೀಕರಣ ಘಟಕ ನಿರ್ಮಾಣಕ್ಕೆ, ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಕಳೆದ ನಾಲ್ಕು ವರ್ಷಗಳಿಂದ, ತೋಟಗಾರಿಕೆ ಬೆಳೆಗಳನ್ನು ಸಂಸ್ಕರಿಸಲು ಸಾಧ್ಯವಾಗದೇ, ಮಾರಾಟ ಮಾಡಿದ್ದರಿಂದ, ಅಂದಾಜು 40 ಸಾವಿರ ಕೋಟಿ ರೂಪಾಯಿ ನಷ್ಟ ಉಂಟಾಗಿದೆ ಎಂದು ಸಚಿವ ಶಿವಾನಂದ ಪಾಟೀಲ ಮಾಹಿತಿ ನೀಡಿದರು. ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಸಂಸ್ಕರಿಸಿ, ಕಾಯ್ದಿರಿಸಿ, ಬೇಡಿಕೆ ಆಧರಿಸಿ ಮಾರಾಟ ಮಾಡಿದರೆ ಮಾತ್ರ ರೈತರು ನಷ್ಟದಿಂದ ಪಾರಾಗಲು ಸಾಧ್ಯ. ಯೋಗ್ಯ ಬೆಲೆ ಪಡೆಯಲು ಸಾಧ್ಯ. ಹೀಗಾಗಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ದಾಸ್ತಾನಿಗೆ ಅನುಕೂಲ ಕಲ್ಪಿಸಲು, ಶೀತಲೀಕರಣ ಘಟಕ ನಿರ್ಮಿಸಲಾಗುತ್ತಿದೆ ಎಂದರು.

<><><>

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನಿಗದಿ ಪಡಿಸಿದ ಬಳಿಕ, ಇಂದು ದೇಶದಾದ್ಯಂತ 14 ಲಕ್ಷ ಮಹಿಳೆಯರು, ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ ಎಂದು ಗೃಹ ಖಾತೆ ಸಚಿವ ಡಾಕ್ಟರ್ ಜಿ.ಪರಮೇಶ್ವರ ತಿಳಿಸಿದರು. ತುಮಕೂರು ದಸರಾ ಅಂಗವಾಗಿ, ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಕ್ರೀಡಾ ದಸರಾ ಉದ್ಘಾಟಿಸಿ, ಅವರು ಮಾತನಾಡಿದರು. ಗಿಡ–ಮರಗಳನ್ನೇ ತಮ್ಮ ಮಕ್ಕಳಂತೆ ಬೆಳೆಸಿದ, ವೃಕ್ಷ ಮಾತೆ ಸಾಲು ಮರದ ತಿಮ್ಮಕ್ಕನವರು, ಮಹಿಳಾ ದಸರಾ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದ್ದಾರೆ ಎಂದರು.

<><><>

ರೈಲ್ವೆ ಇಲಾಖೆಯಲ್ಲಿ ಒಟ್ಟು 12 ಲಕ್ಷ ಹುದ್ದೆಗಳಿದ್ದು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದೆ. ಈ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರೆಯಲು ಆದೇಶ ನೀಡಲಾಗಿದ್ದು, ನಮ್ಮ ರಾಜ್ಯದ ಯುವಜನತೆ ಉಪಯೋಗ ಪಡೆದುಕೊಳ್ಳಬೇಕು, ಎಂದು ಕೇಂದ್ರದ ರೇಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಬಳ್ಳಾರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 6 ಸಾವಿರದ 200 ಕೋಟಿ ರೂಪಾಯಿ ವೆಚ್ಚದಲ್ಲಿ, ಕಲ್ಯಾಣ ಕರ್ನಾಟಕದ ಬಳ್ಳಾರಿ–ಹೊಸಪೇಟೆ ಭಾಗದ ವಿವಿಧ ರೇಲ್ವೆ ಯೋಜನೆಗಳಿಗೆ ಚಾಲನೆ ನೀಡಲಾಗಿದೆ ಎಂದರು.

<><><>

ಬೆಂಗಳೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ರಮಣಶ್ರೀ ಪ್ರತಿಷ್ಠಾನ ನೀಡುವ, 2024ನೇ ಸಾಲಿನ 'ರಮಣಶ್ರೀ ಶರಣ ಜೀವಮಾನ ಸಾಧನೆ ಪ್ರಶಸ್ತಿ'ಗೆ, ಧಾರವಾಡದ ಹಿರಿಯ ವಿದ್ವಾಂಸ, ಪ್ರೊಫೆಸರ ವೀರಣ್ಣ ರಾಜೂರ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 50 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ನವೆಂಬರ್ 18 ರಂದು, ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು, ಪ್ರತಿಷ್ಠಾನದ ಅಧ್ಯಕ್ಷ ಎಸ್. ಷಡಕ್ಷರಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಸೋಮಶೇಖರ ತಿಳಿಸಿದ್ದಾರೆ.

ಪ್ರೊಫೆಸರ ವೀರಣ್ಣ ರಾಜೂರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪ್ರೊ. ವೀರಣ್ಣ ರಾಜೂರ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮೈಸೂರು ದಸರಾ ಮಹೋತ್ಸವದ ಅಂಗವಾಗಿ, ಪುರಾತತ್ವ ಸರ್ವೇಕ್ಷಣ, ಸಂಗ್ರಹಾಲಯ ಮತ್ತು ಪಾರಂಪರಿಕ ಇಲಾಖೆ, ಐತಿಹಾಸಿಕ ಹಾಗೂ ಪಾರಂಪರಿಕ ಕಟ್ಟಡಗಳ ಮಹತ್ವ ಸಾರಲು, 'ಕ್ವಿಕ್ ರೆಸ್ಪಾನ್ಸ್ – ಕ್ಯೂ.ಆರ್. ಕೋಡ್' ವ್ಯವಸ್ಥೆ ಗೊಳಿಸಿದೆ. ಪುರಾತತ್ವ ಮತ್ತು ಪರಂಪರೆ ಇಲಾಖೆಯ ಆಯುಕ್ತ ಎ.ದೇವರಾಜು ಈ ಕುರಿತು ಮಾಹಿತಿ ನೀಡಿ, ಯುವಜನತೆಗೆ, ವಿದ್ಯಾರ್ಥಿಗಳಿಗೆ ಹಾಗೂ ದೇಶ ವಿದೇಶಗಳ ಪ್ರವಾಸಿಗರಿಗೆ, ಮೈಸೂರಿನ ಪಾರಂಪರಿಕ ಕಟ್ಟಡಗಳ ಬಗ್ಗೆ ಮಾಹಿತಿ ಹಾಗೂ ಮಹತ್ವ ತಿಳಿಸುವ ಕಾರ್ಯಕ್ಕೆ, ಡಿಜಿಟಲ್ ಸ್ಪರ್ಷ ನೀಡಲಾಗಿದೆ ಎಂದರು. ಭಿತ್ತಿಚಿತ್ರಗಳಲ್ಲಿ ಮುದ್ರಿಸಲಾಗಿರುವ, ಕ್ಯೂ.ಆರ್. ಕೋಡ್‌ನ್ನು ಸ್ಮಾರ್ಟ್ ಫೋನ್ ಮೂಲಕ ಸ್ಕ್ಯಾನ್ ಮಾಡಿ, ಪಾರಂಪರಿಕ ಕಟ್ಟಡದ ಐತಿಹಾಸಿಕ ಮಹತ್ವ ತಿಳಿಯಬಹುದಾಗಿದೆ. ಪಾರಂಪರಿಕ ಕಟ್ಟಡಗಳ ಮಹತ್ವ ಸಾರುವ, ಕಾಲ್ನಡಿಗೆ ಜನ ಜಾಗ್ರತಿ ಜಾಥಾದಲ್ಲಿ, ನಾಲ್ಕುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪ್ರವಾಸಿಗರು ಭಾಗವಹಿಸಿದ್ದರು.

<><><>

ಇಂದು ವಿಶ್ವ ಹತ್ತಿ ದಿನ. ಜಗತ್ತಿನ 5 ಖಂಡಗಳ, 75 ರಾಷ್ಟ್ರಗಳಲ್ಲಿ ಹತ್ತಿ ಬೆಳೆಯಲಾಗುತ್ತಿದೆ. ಜಗತ್ತಿನ ಒಟ್ಟು ಉತ್ಪನ್ನದ ಶೇಕಡ 23ರಷ್ಟು, ವಾಣಿಜ್ಯ ಬೆಳೆ ಹತ್ತಿಯನ್ನು, ಭಾರತದಲ್ಲಿ ಬೆಳೆಯಲಾಗುತ್ತದೆ. ಆರು ಮಿಲಿಯನ್ ರೈತರು ಹತ್ತಿ ಬೆಳೆಯುತ್ತಿದ್ದು, ಅಂದಾಜು 50 ಮಿಲಿಯನ್ ಜನ ಹತ್ತಿ, ಹತ್ತಿ ಸಂಬಂಧಿತ ಉತ್ಪನ್ನಗಳು ಹಾಗೂ ಜವಳಿ ಕೈಗಾರಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಹತ್ತಿಯನ್ನು 'ಬಿಳಿ ಬಂಗಾರ' ಎಂದು ಕರೆಯಲಾಗುತ್ತದೆ. ಆರ್ಥಿಕವಾಗಿ ಹಿಂದುಳಿದ ದೇಶಗಳಲ್ಲಿ ಹತ್ತಿ ಉದ್ಯಮದ ಮೂಲಕ, ಯವಜನರಿಗೆ ಉದ್ಯೋಗ ಹಾಗೂ ಆರ್ಥಿಕ ಸುಸ್ಥಿರತೆ ತಂದುಕೊಡಲು, ಅಕ್ಟೋಬರ್ 7 ರಂದು ಚಿಂತನ–ಮಂಥನ ನಡೆಸಲಾಗುತ್ತದೆ.

<><><>

ಮುಧೋಳ ಹಾಂಡ್, ಟಿಬೇಟಿಯನ್ ಮಸ್ಟಿಫ್, ಗ್ರೇಟ್ ಡೇನ್ ಹಾಗೂ ಪಿಟ್ ಬುಲ್ ಸೇರಿದಂತೆ, 45 ವಿವಿಧ ತಳಿಗಳ, 480 ಶ್ವಾನಗಳ ಜಾಣ ನಡೆ, ಬೆಡಗು ಬಿನ್ನಾಣ, ಮೈಸೂರು ದಸರಾ ಶ್ವಾನ ಪ್ರದರ್ಶನದಲ್ಲಿ ಜನಮನ ಸೂರೆಗೊಂಡಿತು. ನಾಡ ಹಬ್ಬ ದಸರಾ ಅಂಗವಾಗಿ, ಮೈಸೂರಿನ ಜೆ.ಕೆ. ಮೈದಾನದಲ್ಲಿ ಆಯೋಜಿತ, ಶ್ವಾನ ಪ್ರದರ್ಶನವನ್ನು, ರಾಜ್ಯಸಭೆ ಸಂಸದರಾದ ಸುಧಾ ನಾರಾಯಣ ಮೂರ್ತಿ ಉದ್ಘಾಟಿಸಿದರು. ಇನ್ಫೋಸಿಸ್ ಧರ್ಮದರ್ಶಿ ಸುಧಾ ಅವರು ಪ್ರೀತಿಯಿಂದ ಸಾಕಿದ, ಗೋಲ್ಡನ್ ರಿಟ್ರೀವರ್ ತಳಿಯ, ಗೋಪಿ ಶ್ವಾನ ಸಹ ಪ್ರದರ್ಶಿನಿಯಲ್ಲಿ ಪಾಲ್ಗೊಂಡು, ನೋಡುಗರ ಗಮನ ಸೆಳೆಯಿತು. ಬಳಿಕ ಮಾತನಾಡಿದ ಸುಧಾ ಮೂರ್ತಿ, ಶ್ವಾನಗಳು ಅತ್ಯಂತ ನಂಬಿಗಸ್ಥ ಹಾಗೂ ವಿಶ್ವಾಸಪಾತ್ರ. ಬೀದಿ ನಾಯಿಗಳನ್ನು ದತ್ತು ಪಡೆದು ಸಾಕಲು ಎಲ್ಲರೂ ಮನಸ್ಸು ಮಾಡಬೇಕು. ಪ್ರಾಣಿಗಳೊಂದಿಗೆ ಒಡನಾಡಿ ಬೆಳೆಯುವ ಮಕ್ಕಳು ಮನುಷ್ಯತ್ವ ಉಳ್ಳವರಾಗುತ್ತಾರೆ ಎಂದರು.

<><><>

ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಅವರು, ಮಡಿಕೇರಿಯ ಪ್ರಸಿದ್ಧ ಕಾಫಿ ದಸರಾ ಹಬ್ಬದಲ್ಲಿ ಪಾಲ್ಗೊಂಡರು. ಬಳಿಕ ಮಾತನಾಡಿದ ಸಚಿವರು, ಕೊಡಗು ಹಿರಿಮೆಗೆ ಕಾಫಿ ಬೆಳೆ ಪ್ರಮುಖ ಕೊಡುಗೆ ನೀಡಿದೆ. ಕಾಫಿ ಮಹತ್ವ ಸಾರಲು, ಕಾಫಿ ಉತ್ಸವವನ್ನು ವಿಶೇಷವಾಗಿ ಆಯೋಜಿಸಲಾಗಿದೆ. ಜೊತೆಗೆ, ಕೃಷಿ ಇಲಾಖೆಯಿಂದ ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗಿದೆ ಎಂದರು. ಕೊಡಗು ನೈಸರ್ಗಿಕ ಸೌಂದರ್ಯ, ವೀರ ಯೋಧರ ಹೆಮ್ಮೆಯ ನೆಲ ಹಾಗೂ ಕಾವೇರಿ ನದಿಯ ಉಗಮಸ್ಥಾನವಾಗಿದೆ.

<><><>

ದಕ್ಷಿಣ ಆಫ್ರಿಕಾದ ಸನ್ ಸಿಟಿಯಲ್ಲಿ, ಇದೇ 13ರ ವರೆಗೆ ಆಯೋಜಿತ, ಕಾಮನ್ ವೆಲ್ತ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ, ಬೆಂಚ್ ಪ್ರೆಸ್ ವಿಭಾಗದಲ್ಲಿ ಮಂಗಳೂರಿನ ಪ್ರತಿಭೆ ಪ್ರದೀಪ ಕುಮಾರ ಆಚಾರ್ಯ, 237 ದಶಾಂಶ 5–0 ಕಿಲೋ ಭಾರ ಎತ್ತುವ ಮೂಲಕ, ಚಿನ್ನದ ಪದಕ ಜಯಿಸಿದ್ದಾರೆ.

ಏಕಲವ್ಯ ಪ್ರಶಸ್ತಿ ಪುರಸ್ಕೃತ ಸತೀಶಕುಮಾರ ಕುದ್ರೋಳಿ ಅವರಿಂದ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅಂತಾರಾಷ್ಟ್ರೀಯ ಕ್ರೀಡಾಪಟು, ಕನ್ನಡಿಗ ಪ್ರದೀಪ ಆಚಾರ್ಯ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪ್ರದೀಪ ಆಚಾರ್ಯ ಧ್ವನಿ 26 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಶರನ್ನವ ರಾತ್ರಿ ಹಿನ್ನೆಲೆ, ಧಾರವಾಡದ ರವಿವಾರ ಪೇಟೆಯ ಶ್ರೀ ಲಕ್ಷ್ಮೀ ನಾರಾಯಣ ಮಂದಿರದಲ್ಲಿ, ನಿನ್ನೆ ಭಾನುವಾರ ಚತುರ್ಥಿ ಅಂಗವಾಗಿ, ಸೀತಾ ಸ್ವಯಂವರ ಅವತಾರವನ್ನು ತೊಡಿಸಿ, ಪೂಜಿಸಲಾಯಿತು. ಇಂದು ಲಲಿತಾ ಪಂಚಮಿ ತಿಥಿ ಹಿನ್ನೆಲೆ, ಶ್ರೀ ಶಂಕರ ಪಾರ್ವತಿ ಅವತಾರವನ್ನು ತೊಡಿಸಲಾಗುತ್ತಿದೆ. ನವರಾತ್ರಿಯ 5ನೇ ದಿನವಾದ ಇಂದು, ಧಾರವಾಡದ ಶಾಂತಿ ನಿಕೇತನ ನಗರದ ಕರಿಯಮ್ಮ ದೇವಿಗೆ, ಶ್ರೀ ಮಹಾಗೌರಿ ದೇವಿ ಅಲಂಕಾರ ತೊಡಿಸಿ, ಪೂಜಿಸಲಾಗುತ್ತಿದೆ.

<><><>

ವಿಜಯದಶಮಿ ಉತ್ಸವದ ಅಂಗವಾಗಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಧಾರವಾಡ ನಗರ ಘಟಕದ ವತಿಯಿಂದ, ನಗರದ ಪ್ರಮುಖ ಬೀದಿಗಳಲ್ಲಿ ಗಣವೇಷಧಾರಿ ಸ್ವಯಂಸೇವಕರು, ಭಾನುವಾರ ಆಕರ್ಷಕ ಪಥಸಂಚಲನ ನಡೆಸಿದರು. ಬಳಿಕ, ಭಾರತ ಹೈಸ್ಕೂಲ್ ಮೈದಾನದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಕಾರ್ಯಕಾರಿಣಿ ಸದಸ್ಯ, ಡಾಕ್ಟರ್ ರವೀಂದ್ರ ಬೌದ್ಧಿಕ ಹಾಗೂ ಖ್ಯಾತ ರಥ ಶಿಲ್ಪಿ ಮೃತ್ಯುಂಜಯ ಬಡಿಗೇರ ಅತಿಥಿಯಾಗಿ ಪಾಲ್ಗೊಂಡಿದ್ದರು.

<><><>

ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ಪ್ರವೇಶಿಸಿದ, ವೀರ ರಾಣಿ ಕಿತ್ತೂರು ಚನ್ನಮ್ಮಾಜಿಯ ವಿಜಯ ಜ್ಯೋತಿ ರಥವನ್ನು, ಶಾಸಕ ಆರಗ ಜ್ಞಾನೇಂದ್ರ ಸ್ವಾಗತಿಸಿದರು.

<><><>

ಮೈಸೂರು ದಸರಾ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು, ಕೋಲಾರ ಚಿನ್ನದ ಗಣಿ ತಾಲೂಕಿನ, ಕೋಟಿಲಿಂಗೇಶ್ವರ ಸನ್ನಿಧಿಯ ಸ್ತಬ್ಧಚಿತ್ರ ಆಯ್ಕೆಯಾಗಿದೆ ಎಂದು ಕೋಲಾರ ಜಿಲ್ಲಾ ಕೈಗಾರಿಕಾ ಇಲಾಖೆಯ ಉಪನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

<><><>

ಅಭಿರುಚಿ ಪ್ರಕಾಶನ ಪ್ರಕಟಿಸಿದ, ಕೆ.ಎನ್.ಲಿಂಗಪ್ಪ ಅವರ 'ಮೀಸಲಾತಿಯ ಒಳಮುಖ' ಪುಸ್ತಕವನ್ನು ವಿಧಾನಪರಿ ್ತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಬೆಂಗಳೂರಿನಲ್ಲಿ ಬಿಡುಗಡೆ ಗೊಳಿಸಿದರು.

<><><>

ಪರಿಶಿ ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ, ಪದವಿಧರರ ಸಂಘದ ವತಿಯಿಂದ ಬೆಂಗಳೂರಿನಲ್ಲಿ ಆಯೋಜಿಸಿದ್ದ, ಅಭಿನಂದನಾ ಸಮಾರಂಭದಲ್ಲಿ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರನ್ನು, ಬಿಜೆಪಿ ರಾಷ್ಟ್ರೀಯ ಪ್ರಧಾನ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ ಸನ್ಮಾನಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ಪಿ.ಎಂ. ಕಿಸಾನ್ ಸಮ್ಮಾನ್ ಯೋಜನೆ’ ರೈತರಿಗೆ ಸಂಜೀವಿನಿ – ಪ್ರಲ್ಹಾದ ಜೋಶಿ.
- ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಮಂಡಳಿಯಿಂದ, ಹದಿನೆಂಟು ಶೀತಲೀಕರಣ ಘಟಕಗಳ ನಿರ್ಮಾಣ – ಶಿವಾನಂದ ಪಾಟೀಲ.
- ದೇಶದಾದ್ಯಂತ 14 ಲಕ್ಷ ಮಹಿಳೆಯರ ಕೈಯಲ್ಲಿ, ಸ್ಥಳೀಯ ಆಡಳಿತದ ಚುಕ್ಕಾಣಿ – ಡಾಕ್ಟರ್ ಜಿ.ಪರಮೇಶ್ವರ.
- ಮೈಸೂರಿನ ಪಾರಂಪರಿಕ ಕಟ್ಟಡಗಳ ಮಹತ್ವ ತಿಳಿಸಲು, ‘ಡಿಜಿಟಲ್ ಸ್ಪರ್ಷ’ – ಎ. ದೇವರಾಜು.
- ಇಂದು, ‘ಬಿಳಿ ಬಂಗಾರ’, ಹತ್ತಿಯ ವಿಶ್ವ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ